ಕ್ರೀಡಾಪಟುಗಳಿಗೆ ಪ್ರೋತ್ಸಾಹ ಧನ

2140 (1592); ಶ್ರೀ ಜಗದೀಶ್ ಕುಮಾರ್ ಆರ್. (ಹೆಬ್ಬಾಳ)

ಅ) ರಾಜ್ಯವನ್ನು ಪ್ರತಿನಿಧಿಸುವ ಕ್ರೀಡಾಪಟುಗಳಿಗೆ ತಗಲುವ ವೆಚ್ಚವನ್ನು ಯಾರು ಭರಿಸುತ್ತಾರೆ.

ಆ) ಇವರಿಗೆ ಸರ್ಕಾರದಿಂದ ಯಾವುದಾದರೂ ಪ್ರೋತ್ಸಾಹದಾಯಕ ಅನುದಾನಗಳಿವೆಯೇ; ಇದರಲ್ಲಿ ಸಂಪೂರ್ಣ ಮಾಹಿತಿ ಒದಗಿಸುವುದು;

ಇ) ಹಿಂದಿನ 3 ವರ್ಷಗಳಲ್ಲಿ ನೀಡಿದಂತಹ ಪ್ರೋತ್ಸಾಹದಾಯಕ ಅನುದಾನಗಳ ವಿವರ ಒದಗಿಸುವುದು?

ಶ್ರೀ ಕೆ. ಅಭಯಚಂದ್ರ (ಮಾನ್ಯ ಯುವಜನ ಸೇವಾ ಹಾಗೂ ಮೀನುಗಾರಿಕೆ ಸಚಿವರು)

ಅ) ಕರ್ನಾಟಕ ಕ್ರೀಡಾ ಪ್ರಾಧಿಕಾರದ ಮಾನ್ಯತೆ ಪಡೆದಿರುವ ರಾಜ್ಯ ಕ್ರೀಡಾ ಸಂಸ್ಥೆಗಳ ಮೂಲಕ ಆಯ್ಕೆಗೊಂಡು ದೇಶದ ವಿವಿಧ ಸ್ಥಳಗಳಲ್ಲಿ ನಡೆಯುವ ದಕ್ಷಿಣ ವಲಯ ಹಾಗೂ ರಾಷ್ಟ್ರೀಯ ಮಟ್ಟದ ಪಂದ್ಯಾವಳಿಗಳಲ್ಲಿ ರಾಜ್ಯವನ್ನು ಪ್ರತಿನಿಧಿಸಿ ಭಾಗವಹಿಸುವ ಕ್ರೀಡಾಪಟುಗಳಿಗೆ ತಗಲುವ ವೆಚ್ಚವನ್ನು ಆಯಾ ರಾಜ್ಯ ಕ್ರೀಡಾ ಸಂಸ್ಥೆಗಳ ಕೋರಿಕೆಯ ಮೇರೆಗೆ ಪ್ರಾಧಿಕಾರದ ನಿಯಮಾವಳಿಯನ್ವಯ ಸದರಿ ಸಂಸ್ಥೆಗಳಿಗೆ ಪ್ರಾಧಿಕಾರದಿಂದ ಅನುದಾನವಾಗಿ ಬಿಡುಗಡೆ ಮಾಡಲಾಗುತ್ತಿದೆ.

ಆ) ಕರ್ನಾಟಕ ಕ್ರೀಡಾ ಪ್ರಾಧಿಕಾರದಿಂದ ಉತ್ತಮ ಸಾಧನೆಗೈದ ಕ್ರೀಡಾಪಟುಗಳಿಗೆ ವಿಶೇಷ ಪ್ರಕರಣಗಳಲ್ಲಿ ಪ್ರೋತ್ಸಾಹದಾಯಕವಾಗಿ ನಗದು ಬಹುಮಾನವನ್ನು ಪ್ರಾಧಿಕಾರದಿಂದ ನೀಡಲಾಗುತ್ತಿದೆ.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಕ್ರೀಡೆಗಳಲ್ಲಿ ಈ ಕೆಳಕಾಣಿಸಿದ ಪ್ರೋತ್ಸಾಹಕ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

1. **ನಗದು ಪುರಸ್ಕಾರ ಯೋಜನೆ ಮತ್ತು ಏಕಲವ್ಯ/ಜೀವಮಾನ ಸಾಧನೆ ಪ್ರಶಸ್ತಿ:** ರಾಷ್ಟ್ರ ಮಟ್ಟದಲ್ಲಿ ಪದಕ ವಿಜೇತ ಮತ್ತು ಅಂತರರಾಷ್ಟ್ರ ಮಟ್ಟದಲ್ಲಿ ಭಾಗವಹಿಸಿದ ಕರ್ನಾಟಕ ಕ್ರೀಡಾಪಟುಗಳಿಗೆ ಕ್ರೀಡಾ ಚಟುವಟಿಕೆಗಳಿಗೆ ಪ್ರೋತ್ಸಾಹ (ನಗದು ಪ್ರಶಸ್ತಿ) ಕರ್ನಾಟಕ ರಾಜ್ಯವನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರತಿನಿಧಿಸಿ ವಿಶೇಷ ಸಾಧನೆಗೈದ ಕ್ರೀಡಾಪಟುಗಳಿಗೆ ಪ್ರತಿ ವರ್ಷ ಏಕಲವ್ಯ ಪ್ರಶಸ್ತಿ ಮತ್ತು ಅಪ್ರತಿಮ ತರಬೇತುದಾರರಿಗೆ ಜೀವಮಾನ ಸಾಧನೆ ಪ್ರಶಸ್ತಿ ನೀಡಿ ಪ್ರೋತ್ಸಾಹಿಸಲಾಗುತ್ತಿದೆ.

2. **ಯುವ ಕ್ರೀಡಾ ಸಂಜೀವಿನಿ:** ರಾಜ್ಯದ ಕ್ರೀಡಾ ಶಾಲೆಯ ವಿದ್ಯಾರ್ಥಿಗಳಿಗೆ, ರಾಜ್ಯ, ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಪಟುಗಳಿಗೆ ವಿಮಾ ಸುರಕ್ಷೆಯನ್ನು ಒದಗಿಸಲಾಗುತ್ತಿದೆ.

3. **ವಿದ್ಯಾರ್ಥಿ ವೇತನ:** ರಾಜ್ಯ, ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಕ್ರೀಡಾ ಸಾಧನೆ ಮಾಡಿದ ಕ್ರೀಡಾ ವಿದ್ಯಾರ್ಥಿಗಳಿಗೆ 3000/– ಗಳ ವಿದ್ಯಾರ್ಥಿ ವೇತನ ನೀಡಿ ಪ್ರೋತ್ಸಾಹಿಸಲಾಗುತ್ತಿದೆ.

4. **ಶೈಕ್ಷಣಿಕ ಶುಲ್ಕ ಮರು ಪಾವತಿ ಯೋಜನೆ:** 2013–14ನೇ ಸಾಲಿನಲ್ಲಿ ನೂತನ ಯೋಜನೆಯಾಗಿ ಅನುಷ್ಠಾನಗೊಳಿಸುತ್ತಿರುವ ಈ ಯೋಜನೆಯಡಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಸಾಧನೆ ಮಾಡಿದ ಪಿ.ಯು.ಸಿ. ಯಿಂದ ಸ್ನಾತಕೋತ್ತರ ಪದವಿಯವರೆಗೆ ಈಜು ಮತ್ತು ಜಿಮ್ನಾಸ್ಟಿಕ್ಸ್ ಕ್ರೀಡೆಯಲ್ಲಿ 5 ನೇ ತರಗತಿಯಿಂದ ಸ್ನಾತಕೋತ್ತರ ಪದವಿಯವರೆಗೆ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಶುಲ್ಕ ಮರುಪಾವತಿಸಲಾಗುತ್ತಿದೆ.

ಇ) ಕಳೆದ 3 ವರ್ಷಗಳಲ್ಲಿ ನೀಡಿದಂತಹ ಪ್ರೋತ್ಸಾಹದಾಯಕ ಅನುದಾನಗಳ ವಿವರ

(ರೂ ಲಕ್ಷಗಳಲ್ಲಿ)

ಯೋಜನೆ	2011–12	2012–13	2013–14
ಕ್ರೀಡಾಚಟುವಟಿಕೆಗಳ ಪ್ರೋತ್ಸಾಹ ಯೋಜನೆಯಡಿ ಏಕಲವ್ಯ ನಗದು ಪುರಸ್ಕಾರ	195.00	250.00	240.00
ವಿದ್ಯಾರ್ಥಿ ವೇತನ	6.50	25.00	25.00
ಕ್ರೀಡಾ ಸಂಜೀವಿನಿ	7.50	15.00	25.00
ಶೈಕ್ಷಣಿಕ ಶುಲ್ಕ ಮರುಪಾವತಿ	–	–	40.00

ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕ ಕ್ರೀಡಾ ಪ್ರಾಧಿಕಾರದಿಂದ ನೀಡಲಾದ ಪ್ರೋತ್ಸಾಹದಾಯಕ ನಗದು ಬಹುಮಾನದ ವಿವರ ಈ ಕೆಳಕಂಡಂತಿದೆ.

1. ಶ್ರೀ ವಿನೋದ್ ಗೌಡ, ಅಂತರರಾಷ್ಟ್ರೀಯ ಮಟ್ಟದ ಟೆನ್ನಿಸ್ ಕ್ರೀಡಾಪಟು ಇವರಿಗೆ ವಿವಿಧ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಪಂದ್ಯಾವಳಿಗಳಲ್ಲಿ ಭಾಗವಹಿಸಿದ ಸಂಬಂಧ 2011–12ನೇ ಸಾಲಿನಲ್ಲಿ ₹ 2.00 ಲಕ್ಷಗಳನ್ನು ಪ್ರೋತ್ಸಾಹಧನವಾಗಿ ನೀಡಲಾಗಿರುತ್ತದೆ.

2. ಶ್ರೀ ವಿಕಾಸ್ ಗೌಡ, ಅಂತರರಾಷ್ಟ್ರೀಯ ಅಥ್ಲೆಟಿಕ್ಸ್ ಕ್ರೀಡಾಪಟು ಇವರಿಗೆ 2010–11ನೇ ಸಾಲಿನಲ್ಲಿ ಚೀನಾದಲ್ಲಿ ನಡೆದ 16ನೇ ಏಷ್ಯನ್ ಗೇಮ್ಸ್ ಕ್ರೀಡಾಕೂಟದಲ್ಲಿ ಭಾರತವನ್ನು ಪ್ರತಿನಿಧಿಸಿ ಭಾಗವಹಿಸಿ ಕಂಚಿನ ಪದಕ (ಡಿಸ್ಕಸ್ ಥ್ರೋ) ಪಡೆದ ಸಂಬಂಧ ₹ 5.00

ಲಕ್ಷಗಳನ್ನು ಪ್ರೋತ್ಸಾಹಧನವಾಗಿ 2011–12ನೇ ಸಾಲಿನಲ್ಲಿ ನೀಡಲಾಗಿರುತ್ತದೆ.
3. ಶ್ರೀ ಬಿ.ಆರ್. ನಿಕ್ಷೇಪ್, ಅಂತರರಾಷ್ಟ್ರೀಯ ಮಟ್ಟದ ಲಾನ್ ಟೆನ್ನಿಸ್ ಕ್ರೀಡಾಪಟು ಇವರಿಗೆ ವಿದೇಶದಲ್ಲಿ ಹೆಚ್ಚಿನ ತರಬೇತಿ ಪಡೆಯಲು ₹ 7.00 ಲಕ್ಷಗಳನ್ನು ಪ್ರೋತ್ಸಾಹಕ ಧನಸಹಾಯವಾಗಿ 2012–13 ನೇ ಸಾಲಿನಲ್ಲಿ ಬಿಡುಗಡೆ ಮಾಡಲಾಗಿದೆ.
4. **2013ರಲ್ಲಿ ನಡೆದ ರಣಜಿ ಟ್ರೋಫಿ ಕ್ರಿಕೆಟ್** ಪಂದ್ಯಾವಳಿಯ ರಾಜ್ಯ ತಂಡದ ವಿಜೇತ ಕ್ರೀಡಾಪಟುಗಳಿಗೆ ₹ 100.00 ಲಕ್ಷಗಳನ್ನು ವಿಶೇಷ ಪ್ರೋತ್ಸಾಹಧನವಾಗಿ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಮೂಲಕ 2014–15ನೇ ಸಾಲಿನಲ್ಲಿ ಬಿಡುಗಡೆ ಮಾಡಲಾಗಿದೆ.

ಹೊಸದಾಗಿ ಮಂಜೂರಾದ ಐ.ಟಿ.ಐ. ಕಾಲೇಜುಗಳು

2141 (2462); ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ್ (ನಿಪ್ಪಾಣಿ)

ಅ) ರಾಜ್ಯದ ಯಾವ ಯಾವ ನಗರದಲ್ಲಿ ಹೊಸದಾಗಿ ಐಟಿಐ ಕಾಲೇಜುಗಳು ಮಂಜೂರಾಗಿವೆ; ಯಾವ ಯಾವ ಟ್ರೇಡ್‌ಗಳಿಗೆ ಮಂಜೂರಾತಿ ನೀಡಲಾಗಿದೆ. (ಮತ ಕ್ಷೇತ್ರವಾರು ಮಾಹಿತಿ ಒದಗಿಸುವುದು)

ಆ) ದಿನಾಂಕ 01–01–2012ರಿಂದ 15–05–2014ರವರೆಗೆ ನಿಪ್ಪಾಣಿ ಮತಕ್ಷೇತ್ರದಲ್ಲಿ ಸರ್ಕಾರಿ ಐಟಿಐ ಕಾಲೇಜನ್ನು ಸ್ಥಾಪಿಸುವ ಕುರಿತು ಬಂದಿರುವ ಪ್ರಸ್ತಾವನೆಗಳು ಯಾವುವು; ಇವುಗಳನ್ನು ಆರಂಭಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಇ) ಪ್ರಸಕ್ತ ಸಾಲಿಗೆ ಸರ್ಕಾರದಿಂದ ಮಂಜೂರಾದ ಐಟಿಐ ಕಾಲೇಜುಗಳು ಎಷ್ಟು?